Doc-46
T-2

Reg No B G 155 19 — 4 —72

55 th Year of Publication ★ 'Satyavadi' Daily, Mysore 4

In the Sta e – The First
Golden Jubilee
Celebrated Paper
★
News, Views, Dharmic
Moral Ethical Matters

ರಾಷ್ಟ್ರದಲ್ಲಿ ಪ್ರಥಮ
ಸ್ವಾಮಿ ಣ ಗ
ಮಹೋತ್ಸವ
ರವೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸರಸ್ತ್ರೀದಾರ್ ಎಂ.ವಿ. ಸುಬ್ಬರಾವ್ / ಸಂಪಾದಕರು: ಧರ್ಮಪ್ರಚಾರನಿರತ ಎಂ ಎಸ್. ಕೃಷ್ಣರಾವ್ [2 ಪೈಸೆ

ಭುಟ್ಟೋ ಗೆ ಪ್ರಧಾನರಿಂದ ಮೊಹರಾದ ಪತ್ರ

ಸಭಾತ್ಯಾಗ

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಇಡಬೇಕೆಂಬ ವಿಚಾರದಲ್ಲಿ ಶಾಸನ ಸಭೆಯಲ್ಲಿ ಮಾತುಕತೆ ನಡೆದು 4ಜನ ಸಭಾತ್ಯಾಗ ಮಾಡಿದರು.

★

ಪರ್ಯಾಲೋಚನೆ

ಸ್ಥಳೀಯ ಉಪದೇಶಾಧಿಕಾರಿಗಳ ಅಸಾಧ್ಯಾಯರ ಸಮಸ್ಯೆ ಕುರಿತು ಸಹಾನುಭೂತಿಯಿಂದ ಪರ್ಯಾಲೋಚಿಸಲಾಗುವದೆಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

★

ಸ್ವಾವಲಂಬನೆ

ರಕ್ಷಣಾ ವಿಚಾರದಲ್ಲಿ ಸ್ವಾವಲಂಬನೆ ಕಾರ್ಯದಲ್ಲಿ ಸೇನೆ ನಿಲ್ದಾಣದ ಕಾರಾಗಾರದಿಂದ 7 ಬುಲೆಟ್ ಪ್ರೂಫ್ ಆರ್ಮರ್ಡ್ ವ್ಯಾನ್‌ಗಳು ಹೊರಬಂದವು

★

ಮಂಡಲಿ ರಚನೆಗೆ ಕರೆ

ಹುದರಾಸು ಹಾಗೂ ಬೊಂಬಾಯಿನಲ್ಲಿ ಇರುವಂತೆ ಸ್ಲಂ ಕ್ಲಿಯರೆನ್ಸ್ ಮಂಡಲಿಯ ಸ್ಥಾಪನೆ ಮಾಡಬೇಕೆಂದು ಶಾಸನ ಸಭೆಯಲ್ಲಿ ಈರ್ವರು ಸದಸ್ಯರು ಸಲಹೆ ಮಾಡಿದರೆಂದು ಬೆಂಗಳೂರು ವಾರ್ತೆ.

●

ಸಾಕ್ ಏಜೆಂಟರ ಕೈವಾಡ

ಗುಲ್ಬರ್ಗಾದ ಈಚಿನ ಕೋಮುವಾರು ಗಲಭೆಗಳಲ್ಲಿ ಪಾಕೀಸ್ತಾನದ ಏಜೆಂಟರ ಕೈವಾಡ ಇತ್ತೆಂದು ವಿಧಾನ ಪರಿಷತ್ತಿನಲ್ಲಿ ಶ್ರೀ ಎಸ್. ಆನಂದರಾವ್ ಅವಾದಿಸಿದರು

○

ಶಾಸನ ತರಲು ಯೋಚನೆ

ಗೊಬ್ಬರಕ್ಕೆ ವಿಶ್ವ ಮಾನ್ಯತೆಯನ್ನು ತಪ್ಪಿಸಲು ಶಾಸನವನ್ನು ತರಲು ಸರ್ಕಾರ ಯೋಚಿಸಿದೆಯೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು.

ಕಾಲರ ನಿರೋಧ ಕ್ರಮ

ಮೈಸೂರು ಪುರಸಭೆಯ ಕಮೀಷನರ್ ರವರು ಸ್ಪಷ್ಟೀಕರಣ ಮಾಡಿ, ಮೈಸೂರು ನಗರದಲ್ಲಿ ಕಾಲರ ಸೋಂಕನ್ನು ನಿರೋಧಿಸಲು ಸರ್ವ ವಿಧದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆಯೆಂದು ತಿಳಿಸಿರುವರು ಹಿಂದಿನ ವರ್ಷಗಳ ಅನುಭವದ ಮೇಲೆ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕಾಲರಾ ನಿರೋಧಕ ಕ್ರಮಗಳನ್ನು ಕೈಗೊಳ್ಳಲಾಗಿದೆಯೆಂದು ಅವರು ತಿಳಿಸಿರುವರು.

★

ರಾಜ್ಯ ಪ್ರಶಸ್ತಿ

ರಾಷ್ಟ್ರೀಯ ಉಳಿತಾಯ ಕಾರ್ಯಕ್ರಮದ ಕೆಳಗೆ ಒಂದು ಲಕ್ಷದ ಐದು ಸಾವಿರ ರೂಪಾಯಿಗಳನ್ನು ಸಂಗ್ರಹಣೆ ಮಾಡಿದುದಕ್ಕಾಗಿ ಬಳ್ಳಾರಿಯ ಶ್ರೀಮತಿ ಕ್ರಾಫ್ಟನ್ ಮಹಿಳಾ ಸಂಘದ ಹೆಸರನ್ನು 71–72 ರ ಉಳಿತಾಯ ರಾಜ್ಯ ಪ್ರಶಸ್ತಿಗಾಗಿ ಶಿಫಾರಸು ಮಾಡಲಾಗಿದೆ.

●

ಉಗ್ರ ಕ್ರಮ

ಗಂಧದ ಮರದ ಕಳ್ಳ ಸಾಗಾಣಿಕೆ ತಡೆಯಲು ಉಗ್ರ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದೆಂದು ಕೈಗಾರಿಕೆ ಸಚಿವ ಶ್ರೀ ಎಸ್. ಎಂ ಕೃಷ್ಣ ಶಿವಮೊಗ್ಗದಲ್ಲಿ ತಿಳಿಸಿದರು.

●

ಕೇಂದ್ರದ ನೆರವು

ಮೈಸೂರು ರಾಜ್ಯದ ಮುಂದಿನ ಸಾಲು ಯೋಜನೆಗೆ ನಿಗದಿ ಮಾಡಿರುವ 72 30 ಕೋಟಿ ರೂಪಾಯಿನಲ್ಲಿ ಕೇಂದ್ರ ಸರ್ಕಾರ 33 56 ಕೋಟಿ ರೂಪಾಯಿ ಧನಸಹಾಯ ನೀಡುತ್ತದೆ ಮಿಕ್ಕ 38 74 ಕೋಟಿ ರೂಪಾಯಿಯನ್ನು ರಾಜ್ಯವೇ ವಾರ್ಷಿಕ ಯೋಜನೆಗೆ ರೂಢಿಸಿಕೊಳ್ಳಬೇಕಾಗುತ್ತದೆ.

★ ಒಂದೊಂದು ಕೈಗಾರಿಕೆಗೆ ಒಂದೊಂದು ಸಂಘ ಇರಬೇಕೆಂದು ಕಾರ್ಮಿಕ ಮಂತ್ರಿ ಶ್ರೀ ಅಜೀಜ್ ಸೇಟ್ ತಿಳಿಸಿದರು.

9 ಮಂದಿಗೆ ಗಾಯ

ಚಿಕ್ಕಬಳ್ಳಾಪುರದಲ್ಲಿ ಒಂದು ಹುಣಿಸೇ ಮರದ ಹಕ್ಕಿನ ಮೇಲೆ 2 ಗುಂಪುಗಳಲ್ಲಿ ಹೊಡೆದಾಟವಾಗಿ ಓರ್ವ ಹೆಂಗಸು ಸೇರಿ 9 ಮಂದಿ ತೀವ್ರ ಗಾಯಗೊಂಡರು.

★

ಹಾರಂಗಿ ಅಣೆಕಟ್ಟು

ರಾಜ್ಯಪಾಲರಾದ ಶ್ರೀ ಮೋಹನ್‌ಲಾಲ್ ಸುಖಾದಿಯಾರವರು ಹಾರಂಗಿ ಅಣೆಕಟ್ಟಿಗೆ ಭೇಟಿಕೊಟ್ಟಾಗ, ಅಲ್ಲಿಯ ಎಕ್ಸಿಕ್ಯೂಟೀವ್ ಇಂಜಿನಿಯರ್ ಸುಬ್ಬಯ್ಯನವರು, ಈ ವರ್ಷ ಮೂವತ್ತು ಅಡಿಗಳ ನೀರನ್ನು ದಾಸ್ತಾನು ಮಾಡಲಾಗುವದೆಂದು. ಮುಂದಿನ ವರ್ಷದ ಕಡೆಯಲ್ಲಿ ಏಪ್ರಿಲ್‌ರಿಂದ ಎಂಬತ್ತು ಅಡಿಗಳ ನೀರು ದಾಸ್ತಾನು ಮಾಡಲಾಗುವುದೆಂದು ತಿಳಿಸಿದರು.

★

ಕೇಂದ್ರದ ಪ್ರವೇಶ

ನ್ಯಾಯ ನುಂಡಲಿಯ ಹೊರಗೇ ರಾಜ್ಯಗಳು ಕೃಷ್ಣಾ ನದಿ ಕಲಹವನ್ನು ವ್ಯವಸ್ಥೆ ಮಾಡಿಕೊಳ್ಳುವಂತೆ ಕೇಂದ್ರ ಸಲಹೆ ನೀಡಿರುವುದಾಗಿ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸುರವರು ತಿಳಿಸಿದರು.

★

ಮಧ್ಯಸ್ಥಿಕೆ ಪ್ರಯತ್ನ

ಸುಪ್ರೀಂ ನ್ಯಾಯಾಲಯದಲ್ಲಿ ತೀರ್ಪು ಆದನಂತರ, ಕಾವೇರಿ ನೀರು ವಿಷಯದಲ್ಲಿ ತಮಿಳುನಾಡು ಹಾಗೂ ಮೈಸೂರು ನೀರು ವ್ಯಾಜ್ಯದ ಬಗೆಗೆ ಮಧ್ಯಸ್ಥಿಕೆ ಪ್ರಯತ್ನ ಕೈಗೊಳ್ಳಬೇಕೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

★

★ ಮೈಸೂರು ಮಹಾರಾಷ್ಟ್ರ ಗಡಿ ಬಗೆ ಪಾರ್ಲಿಮೆಂಟು ತೀರ್ಮಿನಂತೆ ನಡೆಯಬೇಕೆಂದು ಮುಖ್ಯ ಮಂತ್ರಿ, ಶ್ರೀ ಅರಸು ತಿಳಿಸಿದ್ದಾರೆ.

ಭುಟ್ಟೋರಿಗೆ ಲಕೋಟೆ

ನವ ದೆಹಲಿಯಿಂದ ಬಂದಿರುವ ವರದಿ ಪ್ರಕಾರ, ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಪಾಕೀಸ್ತಾನದ ಅಧ್ಯಕ್ಷ ಭುಟ್ಟೋರಿಗೆ ಒಂದು ಮೊಹರಾದ ಲಕೋಟೆಯನ್ನು ಸ್ವಿಸ್ ರಾಯಭಾರಿಯ ಮೂಲಕ ಕಳಿಸಿದರು ರಾಯಭಾರಿ ಮುಟ್ಟಿದ ಮಾತುಕತೆಗಳಿಗೆ ಸ್ಥಳದ ವಿಷಯ ಇರಬಹುದೆನ್ನಲಾಗಿದೆ.

○

ಎಂಟು ಜನರ ಮರಣ

ಶಿಲಾಂಗಿನಿಂದ ವರದಿಯಾಗಿರುವಂತೆ ಒಂದು ಸ್ಪೇಸರ್ ವ್ಯಾಗೆ ಬೆಂಕಿ ಹೊತ್ತಿ, ಅದು ಮೇಘಾಲಯ–ಬಾಂಗ್ಲಾ ಗಡಿಯ ಬಾಕಾಟ್ ಹತ್ತಿರ ಬಿಟ್ಟದ ರಸ್ತೆಯಿಂದ ಉರುಳಿ, 8 ಮಂದಿ ಸಕ್ತು 22 ಮಂದಿಗೆ ಗಾಯವಾಯಿತು.

● ಭಾರತದ ನಾಲ್ಕನೆಯ ಯೋಜನೆಯಲ್ಲಿ ಕಾವು ದಾಸ್ತಾನು 5 ಮಿಲಿಯ ಟ್ ಆಹಾರ ಧಾನ್ಯ ಕೊರತೆಯ ಗುರಿಯು ನೆರವೇರಿರುವುದಾಗಿ ನವ ದೆಹಲಿ ವಾರ್ತೆ ತಿಳಿಸುತ್ತದೆ.

○ ಬಾಂಗ್ಲ ದೇಶ ಶಾರ್ಣವೆಲ್ಲಿಗೆ ಸೇರಿಕೊಂಡಿತು.

ಧಾಡಿಲೆಪುರಾಣ

ಇಂಗ್ಲೆಂಡಿನ ಎಲಿಜಬೆತ್ ರಾಣಿಯ ಕಾಲದ ವರೆಗೆ ಧಾಡಿಗೆ ಯಾವ ನಿರ್ಬಂಧವೂ ಇರಲಿಲ್ಲವಾದರೂ, ಆಕೆ ಪ್ರತಿ ಧಾಡಿಗನ ಕೆಳಲೂ, ಸರಕಾರಕ್ಕೆ ವಾರ್ಷಿಕ ಎರಡು ರೂಪಾಯಿ ಕಂದಾಯ ವಿಧಿಸಿದಳು. ಅಧಿಕ ಪಾದ್ರಿಗಳು ಮತ್ತು ದಾರ್ಶನಿಕರು ಕರೆತ್ತರೂ ಧಾಡಿ ಬೋಳಿಸಲಿಲ್ಲ. ದಾಳಿ ಬೆಳೆಸುವುದು ಹೆಣ್ಣುತನವೆಂದು ಇಂಗ್ಲೆಂಡಿನ ಸಾಮ್ರಾಟ ಕಿಂಗ್ ವಿಲಿಯಂ ಹೇಳಿದರೆ, ಯೂರೋಪಿನ ಹಾಸ್ಯ ಕವಿ ಎಡ್ವರ್ಡ್ ಲೀಯರ್, ಹಲುಸಾಗಿ ಬೆಳೆದ ಧಾಡಿಯ ವೃದ್ಧನೊಬ್ಬನ ಧಾಡಿಗೆ ಕೈಹಾಕಿದಾಗ ಅದರಿಂದ 1 ಕೋಳಿ 1 ಗುಬ್ಬಚ್ಚಿ 6 ಗೂಗೆಗಳು ಹಾರಿದುವೆಂದು ನಗೆಯಾಡಿದ್ದಾನೆ.

ಅಂಕಿಸಂಖ್ಯಾಶಾಸ್ತ್ರಜ್ಞರು ಹೇಳುವಂತೆ, ಗಂಡಸಿನ ಮುಖದ 30 ಸಾವಿರವಿರುವ ಕೂದಲುಗಳನ್ನು ಒಟ್ಟು ಜೋಡಿಸಿದರೆ 50 ಅಡಿ ಉದ್ದವಾಗುತ್ತದೆ. ದಿನಕ್ಕೆ ಧಾಡಿ 1/1000 ಅಂಗುಲ ಬೆಳೆಯುತ್ತದೆ. ಒಮ್ಮೆಯ ಕ್ಷೌರದಲ್ಲಿ 21 ಅಡಿ ಕೂದಲು ಬೋಳಿಸಲ್ಪಡುತ್ತದೆ : ನಮ್ಮ ಜೀವಿತ ಪೂರ್ಣ 6 ತಿಂಗಳು ಧಾಡೀ ಕ್ಷೌರಕ್ಕೇ ವ್ಯಯವಾಗುತ್ತದೆ ; 4320 ತಾಸುಗಳು ಈ ಅವಧಿಯಲ್ಲಿ 47 ಕೋಟಿ ಕೂದಲನ್ನು ನೀವು ತೆಗೆದಿರುತ್ತೀರಿ !

ಪಂಜಾಬಿನ ಪತಿಯಾಳ ಜೈಲಿನಲ್ಲಿರುವ ಕರ್ತಾರಸಿಂಗ್‌ಗೆ ವಿಶ್ವದಲ್ಲೇ ಹಿರಿದಾಡ ಐದೂವರೆ ಅಡಿ ಉದ್ದದ ಧಾಡಿ ಇದೆ. ಪಂಜಾಬಿನ ಸಾಧೂರಾಮನ ಮಿಸೆಯು ಉದ್ದ 26 ಇಂಚು. 1933 ರಲ್ಲಿ ಚಿಕಾಗೋ ಜಾಗತಿಕ ಉತ್ಸವದಲ್ಲಿ ಭಾಗವಹಿಸಿದ ಅರ್ಜುನ ದೇಗರನಿಗೆ 96 ಅಂಗುಲ ಮಿಸೆ ಇತ್ತು.

— ಪ. ರಾಮಕೃಷ್ಣ ಶಾಸ್ತ್ರಿ [ಕೃ. ಸಂ].

ವುಡ್‌ಲಾಂಡ್ 14-4-72 ರಿಂದ ಆಮೋಘ 3ನೇ ವಾರ

ಪ್ರಗತಿ ಚಿತ್ರ ಇಂಟರ್ ನ್ಯಾಷನಲ್ ರವರ ಹಿಂದಿ ಈಸ್ಟ್‌ಮೆನ್ ಕಲರ್ ಚಿತ್ರ

ಗಂಗಾ ತೇರಾ ಪಾನಿ ಅಮೃತ್

ಪಾತ್ರ : ಅಶೋಕ ಕುಮಾರ್, ನವೀನ್ ನಿಶ್ಚಲ್, ಯೋಗಿತಾ ಬಾಲಿ, ಶತ್ರುಘ್ನ ಸಿನ್ಹಾ, ಸ್ಯಾಣ್, ಪೆಹ್ಮಾನ್, ನಿರೂಪರಾಯ್ ಮುಂತಾದವರು

ಸಂಗೀತ – ರವಿ (ದಿನ 3 ಪ್ರದರ್ಶನಗಳು) ದಿಗ್ದರ್ಶನ – ವೀರೇಂದ್ರ ಸಿನ್ಹಾ

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ನಾಂದಿ

ಅಪೂರ್ವ 14 4 72 ರಿಂದ

.... ಅತ್ಯಮೋಘ ಕನ್ನಡ ಚಿತ್ರ ....

ಯಾವ ಜನ್ಮದ ಮೈತ್ರಿ

ತಾರಾಗಣ— ಗಂಗಾಧರ್, ಕೆ. ಎಸ್. ಅಶ್ವಥ್, ಕಲ್ಪನಾ

ಸಂಗೀತ : ವಿಜಯಭಾಸ್ಕರ ಚಿತ್ರಕಥೆ – ನಿರ್ದೇಶನ : ಗೀತಪ್ರಿಯ

Contribute Liberally

to the National Defence Fund

Help The Gorakshana

— Humanitarian Propoganda Monthly ....

Protect the Cow

Quality Print & Neat Binding

Lakshminarasimha Press

Sivarampet, Mysore

'ಮಾನವನು ಕೀಳು ಸೃಷ್ಟಿಯ ಧಣಿ, ಕ್ರಿಷ್ಣ ವೆನ್ನುವುದು ಸೊಕ್ಕಿನ 'ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ ರವರ ಜೊಚ್ಚಲು ಚಿತ್ರ

ಆನೆ – ಹುಡುಗ

ಹೊಸ ತರಹದ ತಿಳುವಳಿಕೆ ಕೊಡುವ ಆಕರ್ಷಣೀಯ ಚಿತ್ರ

ಕುಟುಂಬ ಯೋಜನ

ದೇಶ ಹಿತಕ್ಕಾಗಿ

SHAKTI

SUDHA

A Superb Tonic

Edited Printedand Published by Dharmapracharanirata M.S Krishna Rao (Proprietor) at the Satyavadi Press Chamarajapuram Mysore 4